ಕಾರ್ಯಗಳಿಗಾಗಿ ರೂ. 42.00 ಲಕ್ಷ ಅನುದಾನ ಒದಗಿಸಿದ್ದು, ಈವರೆವಿಗೆ ರೂ. 19.66 ಲಕ್ಷ ಹಣ ಬಿಡುಗಡೆಯಾಗಿದೆ. ನೇತ್ರಾವತಿ ತಿರುವು ಯೋಜನೆಯಿಂದ ಕೋಲಾರ ಹಾಗೂ ಚಿಕ್ಕಬಳ್ಳಾಪುರ ಪ್ರದೇಶಗಳಿಗೆ ಕುಡಿಯುವ ನೀರು ಮತ್ತು ಅಂತರ್ಜಲ ಅಭಿವೃದ್ಧಿಗೆ ನೀರು ಬಳಸುವ ಪ್ರಸ್ತಾಪವಿರುತ್ತದೆ. ಇದರ ತನಿಖಾನ್ವೇಷಣೆ ಹಾಗೂ ವರದಿಯ ತಯಾರಿಕೆಯ ವೆಚ್ಚ ರೂ. 14.25 ಕೋಟಿಗಳಾಗಿರುತ್ತದೆ. ಈವರೆಗೆ ರೂ. 643.79 ಲಕ್ಷಗಳನ್ನು ಮೇ॥ ಎನ್.ಆರ್.ಎಸ್.ಸಿ. ಸಂಸ್ಥೆಗೆ ಪಾವತಿ ಮಾಡಲಾಗಿದೆ.

ಊ) ಭದ್ರಾ ಮೇಲ್ದಂಡೆ ಯೋಜನೆಯಿಂದ ತುಮಕೂರು ಮತ್ತು ಕೋಲಾರ ಜಿಲ್ಲೆಗಳ ಕುಡಿಯುವ ನೀರಿನ ಭಾಗದ ಡಿ.ಪಿ.ಆರ್. ತಯಾರಿಸಲಾಗುತ್ತಿದ್ದು, ಅದರ ಅನುಮೋದನೆ ನೀಡಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. ನೇತ್ರಾವತಿ ತಿರುವು ಯೋಜನೆಯ ತನಿಖಾನ್ವೇಷಣೆ ಹಂತದಲ್ಲಿದ್ದು, ಯೋಜನೆಯ ಅನುಷ್ಠಾನದ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಕಿಲ್ಲರ ಹಟ್ಟಿ ಕೆರೆ

87 (816) ಶ್ರೀಮತಿ ಪ್ರತಾಪಗೌಡ ಪಾಟೀಲ್ (ಮಸ್ಕಿ) – ಮಾನ್ಯ ಜಲಸಂಪನ್ಮೂಲ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಕಿಲ್ಲರಹಟ್ಟಿ ಕೆರೆಗೆ ಹಿರೇಹಳ್ಳದಿಂದ ನೀರು ತುಂಬಿಸುವ ಯೋಜನೆಯು ಸರ್ಕಾರದ ಮುಂದಿದೆಯೇ?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು):–

ಪರಿಶೀಲನೆಯಲ್ಲಿದೆ

ವಿಧವಾ ವೇತನ, ಸಂಧ್ಯಾ ಸುರಕ್ಷಾ ಅಂಗವಿಕಲ ಮತ್ತು ರಾಷ್ಟ್ರೀಯ ಕುಟುಂಬ ಯೋಜನೆಗಳು

89 (833) ಶ್ರೀ ನರೇಂದ್ರ ಬಾಬು ನೆ.ಲ. (ಮಹಾಲಕ್ಷ್ಮಿ ಲೇ–ಔಟ್)– ಕಂದಾಯ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ವಿಧವಾ ವೇತನ, ಸಂಧ್ಯಾ ಸುರಕ್ಷಾ ಅಂಗವಿಕಲ ಮತ್ತು ರಾಷ್ಟ್ರೀಯ ಕುಟುಂಬ ಯೋಜನೆಗಳಿಗೆ ಬಿಡುಗಡೆ ಮಾಡುತ್ತಿರುವ ವೇತನವು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಬಂದಿದ್ದಲ್ಲಿ, ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು ಹಾಗೂ ಕ್ಷಿಪ್ರ ರೀತಿಯಲ್ಲಿ ಬಿಡುಗಡೆ ಮಾಡಲು ಸರ್ಕಾರ ತೆಗೆದುಕೊಳ್ಳುವ ಕ್ರಮವೇನು;

ಇ) ನಗರದ ಎಲ್ಲಾ ಬೆಂಗಳೂರು ಒನ್ ಸೆಂಟರ್‌ನಲ್ಲಿ ವಯೋವೃದ್ಧರು, ಅಂಗವಿಕಲರು ಮತ್ತು ವಿಧವೆಯರು ಅರ್ಜಿಗಳನ್ನು ಸಲ್ಲಿಸಲು ಬಂದಾಗ ಸರಿಯಾದ ಮಾರ್ಗದರ್ಶನ ನೀಡದೇ ತೊಂದರೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈ ತೊಂದರೆಗಳನ್ನು ನಿವಾರಿಸಲು ಸರ್ಕಾರ ತೆಗೆದುಕೊಳ್ಳುವ ಕ್ರಮವೇನು ಹಾಗೂ ಇದಕ್ಕೆ ಕಾರಣವಾದ ಸಿಬ್ಬಂದಿ/ಅಧಿಕಾರಿ ವರ್ಗದವರ ಮೇಲೆ ಸರ್ಕಾರ ಶಿಸ್ತು ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು):–

ಅ) ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿಯಲ್ಲಿ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳಿಗೆ ಏಪ್ರಿಲ್ 2010ರ ಮಾಹೆಯವರೆಗೆ ಪಿಂಚಣಿಯನ್ನು ಎಲ್ಲಾ ಖಜಾನೆಗಳಿಂದ ವಿತರಿಸಲಾಗಿದೆ. ಹಾಗೂ ಮೇ ಮಾಹೆಯ ಪಿಂಚಣಿಯನ್ನು ಜೂನ್ ಮಾಹೆಯಲ್ಲಿ ಪಾವತಿಸಬೇಕಾಗಿದ್ದು, ಈಗಾಗಲೇ ಅಂಚೆ ಕಛೇರಿಗಳಿಗೆ ರವಾನಿಸಲಾಗಿದೆ. (ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ).

ಆ) ತಂತ್ರಜ್ಞಾನದ ನೆರವಿನಿಂದ ಪಿಂಚಣಿಗಳನ್ನು ಕ್ಷಿಪ್ರ ಹಾಗೂ ಪಾರದರ್ಶಕ ರೀತಿಯಲ್ಲಿ ಫಲಾನುಭವಿಗಳಿಗೆ ತಲುಪಿಸಲು ಸರ್ಕಾರಿ ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

ಇ) ಬೆಂಗಳೂರು ಮಹಾನಗರ ಗೃಹ ಮತ್ತು ವಾಣಿಜ್ಯ ಬಳಕೆಯ ವಿದ್ಯುತ್‌ಚ್ಛಕ್ತಿ, ನೀರು, ದೂರವಾಣಿ, ಮೊಬೈಲ್ ಇತ್ಯಾದಿ ಬಿಲ್ ಪಾವತಿ, ಪಾಸ್‌ಪೋರ್ಟ್‌ಗಾಗಿ ಅರ್ಜಿ ಸ್ವೀಕಾರ, ಸರ್ಕಾರಿ/ಖಾಸಗಿ ಬಸ್ ಟಿಕೇಟ್ ಮುಂಗಡ, ಪಿಯು ವಿದ್ಯಾರ್ಥಿಗಳಿಗಾಗಿ ಮರು ಮೌಲ್ಯ ಮಾಪನ ಅರ್ಜಿ ಸ್ವೀಕಾರ ಮುಂತಾದ ಹತ್ತು ಹಲವು ಸರ್ಕಾರಿ ಮತ್ತು ಖಾಸಗಿ ಸೇವೆಗಳನ್ನು ಒಂದೇ ಸೂರಿನಡಿ ನೀಡಲು ಅನುವಾಗುವ ಬೆಂಗಳೂರು ಒನ್ ಸಮಗ್ರ ನಾಗರೀಕ ಸೇವಾ ಕೇಂದ್ರಗಳು ನಗರದ ವಿವಿಧ ಬಡಾವಣೆಗಳಲ್ಲಿ ಕಾರ್ಯ ನಿರ್ವಹಿಸುತ್ತದೆ ಹಾಗೂ ನಾಗರೀಕರಿಗೆ ಅಗತ್ಯವಾಗಿರುವ ಜಾತಿ, ವರಮಾನ, ವಿಧವಾ, ಅಂಗವಿಕಲ, ವೃದ್ಧಾಪ್ಯ ಮತ್ತು ಸಂಧ್ಯಾ ಸುರಕ್ಷಾ ಯೋಜನೆಗಳ ಪ್ರಮಾಣ ಪತ್ರಗಳಿಗಾಗಿ ಅರ್ಜಿಗಳನ್ನು ನಗರದ 4 ತಾಲ್ಲೂಕು ಕಛೇರಿಗಳಲ್ಲಿ ಮಾತ್ರವೆ ಸ್ವೀಕರಿಸಲಾಗುತ್ತದೆ. ಇದಕ್ಕಾಗಿ ನಾಗರೀಕರು ಹೆಚ್ಚಿನ ಸಮಯ ಮತ್ತು ಹಣ ವ್ಯಯ ಮಾಡಬೇಕಾಗುತ್ತಿತ್ತು.

ಮೇಲ್ಕಂಡ ಪ್ರಮಾಣ ಪತ್ರಗಳಿಗಾಗಿ ನಾಗರೀಕರು ತಾಲ್ಲೂಕು ಕಛೇರಿಗೆ ಹೆಚ್ಚು ಓಡಾಡುವ ತೊಂದರೆಯನ್ನು ತಪ್ಪಿಸಿ, ಅವರಿಗೆ ಅನುಕೂಲ ಮಾಡಿ ಕೊಡಬೇಕೆಂಬ ಉದ್ದೇಶದಿಂದ ಬೆಂಗಳೂರು ಒನ್‌ನ ಮೂಲದ್ಯೇಯೋದ್ದೇಶಗಳು ಬೇರೆಯದೇ ಆಗಿದ್ದರೂ

ಸಹ ಪ್ರಾಯೋಗಿಕವಾಗಿ 6 ಬೆಂಗಳೂರು ಒನ್ ಕೇಂದ್ರಗಳಲ್ಲಿ (ನಾಗರಬಾವಿ, ಯಶವಂತಪುರ, ಟ್ಯಾನರಿ ರೋಡ್, ರಾಜರಾಜೇಶ್ವರಿ ನಗರ, ಇಂದಿರಾನಗರ ಹಾಗೂ ಯಲಹಂಕ) ಆರ್‌ಡಿಎಸ್ ಯೋಜನೆಯಡಿ ಮೇಲ್ಕಂಡ ಪ್ರಮಾಣ ಪತ್ರಗಳಿಗಾಗಿ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದೆ.

ಅರ್ಜಿಗಳನ್ನು ಸಲ್ಲಿಸಲು ಬಂದಾಗ ಸರಿಯಾದ ಮಾರ್ಗದರ್ಶನ ನೀಡದೇ ತೊಂದರೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ) ಅನ್ವಯಿಸುವುದಿಲ್ಲ

ಆಯವ್ಯಯದಲ್ಲಿ ಹಣ ಮಂಜೂರು

90 (835) ಶ್ರೀ ಮಹದೇವ ಪ್ರಸಾದ ಹೆಚ್. ಎಸ್. (ಗುಂಡ್ಲುಪೇಟೆ) – ಜವಳಿ, ಯುವಜನ ಸೇವಾ ಮತ್ತು ಕ್ರೀಡಾ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಯುವಜನ ಸೇವಾ ಇಲಾಖೆಗೆ 2008–09 ಮತ್ತು 2009–10ನೇ ಸಾಲಿನ ಆಯವ್ಯಯದಲ್ಲಿ ಎಷ್ಟು ಹಣವನ್ನು ಮಂಜೂರು ಮಾಡಲು ಅಂದಾಜಿಸಲಾಗಿತ್ತು. ಈ ಪೈಕಿ ಎಷ್ಟು ಹಣವನ್ನು ಬಿಡುಗಡೆ ಹಾಗೂ ಖರ್ಚು ಮಾಡಲಾಗಿದೆ;

ಆ) ಸದರಿ ಇಲಾಖೆಗೆ ಕೇಂದ್ರ ಸರ್ಕಾರದಿಂದ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ಹಾಗೂ ಈ ಪೈಕಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ;

ಇ) ಯುವಜನ ಸೇವಾ ಇಲಾಖೆಯು ಯಾವ ಯಾವ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆಗಳಿಗೆ ಕಳೆದ ಎರಡು ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ಎಷ್ಟು ಅನುದಾನ ಬಿಡುಗಡೆಯಾಗಿದೆ?

ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಜವಳಿ, ಯುವಜನ ಸೇವಾ ಮತ್ತು ಕ್ರೀಡಾ ಸಚಿವರು):–

ಅ)

ವರ್ಷ	ಬಿಡುಗಡೆ ಮೊತ್ತ (ರೂ. ಲಕ್ಷಗಳಲ್ಲಿ)	ಖರ್ಚು (ರೂ. ಲಕ್ಷಗಳಲ್ಲಿ)
2008–09	5982.00	4577.19
2009–10	8811.83	8554.00

ಆ) 2008–09ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಪೈಕಾ ಯೋಜನೆಯಡಿ 565 ಗ್ರಾಮ ಪಂಚಾಯತ್ 18 ಬ್ಲಾಕ್ ಪಂಚಾಯತ್‌ಗಳಲ್ಲಿ ಕ್ರೀಡಾ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಬಿಡುಗಡೆ ಮಾಡಿದ್ದು. ಸದರಿ ಹಣ ವೆಚ್ಚ ಭರಿಸಲು ಸಂಬಂದಿಸಿದ ಜಿಲ್ಲಾ ಪಂಚಾಯತ್‌ಗಳ ಮೂಲಕ ಬ್ಲಾಕ್ ಮತ್ತು ಗ್ರಾಮ ಪಂಚಾಯತ್‌ಗಳಿಗೆ ರೂ. 2,45,62,500/